ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಸರ್ಕಾರದ ಗಮನಕ್ಕೆ ಬಂದಿದೆ. ನಮ್ಮ ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿನಲ್ಲಿ ಫುಲ್ ಟೈಮ್ ಡೈರೆಕ್ಟರ್ ಒಬ್ಬರು ನಮ್ಮ ಇಲಾಖೆಯವರು ಇದ್ದಾರೆ, ಅವರು ತಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಲಸಗಳನ್ನು ಮಾಡಿಸುತ್ತಾರೆ.

ಶ್ರೀ ಎಂ. ಎಸ್. ಸಜ್ಜನ್:—ಇದುವರೆಗೆ ಎಷ್ಟೋ ಪಂಚವಾರ್ಷಿಕ ಯೋಜನೆಗಳು ಆದವು. ಆ ಪಂಚವಾರ್ಷಿಕ ಯೋಜನೆಗಳಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಈ ೯ ಜಿಲ್ಲೆಗಳಲ್ಲಿ ಶಿಲಾ ಶಾಸನ ಸಾಹಿತ್ಯ ಸಮೀಕ್ಷೆಯನ್ನು ಇದುವರೆಗೆ ಏತಕ್ಕೆ ಮಾಡಲಿಲ್ಲ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ ಮಾತಿಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ.

*Restriction Over Urban Land Ceiling*

513. SRI PRABHAKAR TELKAR (Kanagi).—

Will the Minister for Revenue be pleased to state:—

(a) whether the Government has any proposal to impose restriction over the Urban Land Ceiling;

(b) whether the central Government has given any directives for stopping the transfer of big landed properties in the Urban Area;

(c) if. so, whether the Government has taken any steps to stop the transfer of properties in Urban Area ?

SRI N. HUTCHAMASTHY GOWDA:—(Minister for Revenue)

(a) Yes. For securing uniformity in legislation relating to imposition of ceiling on Urban Immovable property, the State Legislature passed resolutions in December 1972 leaving it to the Central Government to regulate the subject by passing of a Law by Parliament.

(b) The Central Government have not given any directive, but they have left it to the State Government to consider the desirability of having a legislation prohibiting alienation of Urban vacant lands/ property pending legislation imposing a ceiling on Urban property.

(c) No further steps have been taken since December, 1972, but the question is now under examination of Government in view of a very recent communication from the Government of India.

SRI PRABHAKAR TELKAR —In answer to (a), may I know whether the State Government has sent any proposals to the Central Government, and if so, the salient features of the same ?

† ಶ್ರೀ ಎನ್. ಹುಚ್ಚಮಾಸ್ತಿಗೌಡ:—ನಾವು ಅಧಿಕಾರವನ್ನು ಅವರಿಗೆ ಮಹಜರ್ ಕೊಟ್ಟಿದ್ದೇವೆ.

SRI PRABHAKAR TELKAR:—In answer to (b) and (c), may I know whether the Government has taken any steps in this regard ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಇದನ್ನು ಪರ್ಯಾಲೋಚನೆ ಮಾಡಬೇಕು ಎಂದು ಟೀನೇ ಜನವರಿ ೧೯೭೫ರಲ್ಲಿ ಪತ್ರ ಬರೆದಿದ್ದಾರೆ. ಈಗ ಅದು ಸರ್ಕಾರದ ಪರ್ಯಾಲೋಚನೆಯಲ್ಲಿ ಇದೆ.

SRI D. B. KALMANKAR:—It was stated that the matter is left to the Central Government. May I know whether the views of the State Government are made known to the Central Government, and whether this Government has made any recommendation as to what should be the ceiling?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಹಿಂದೆ ಒಂದು ಬಿಲ್ಲನ್ನು ನಾವು ತಯಾರು ಮಾಡಿದ್ದೆವು. ಆದರ ವಿವರಗಳನ್ನು ಮತ್ತು ಸಭೆಯಲ್ಲಿ ಚರ್ಚೆಗೆ ಬಂದಾಗ, ವ್ಯಕ್ತಪಟ್ಟ ಅಭಿಪ್ರಾಯವನ್ನು ಅವರಿಗೆ ತಿಳಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್:—ಅಲಿನೇಷನ್ ಮಾಡುವಂತ ಅಪಾಯ ಇರುವುದರಿಂದ ಈ ಒಂದು ಬಿಲ್‌ನ್ನು ರಾಜ್ಯಸರ್ಕಾರವೇ ತೆಗೆದುಕೊಂಡು ಪರ್ಯಾಲೋಚನೆ ಮಾಡಬೇಕು ಎಂದು ಕೇಂದ್ರಸರ್ಕಾರದವರು ಹೇಳಿರುವುದೇಂದು ಈ ಬಿಲ್ಲನ್ನು ಯಾವಾಗ ತೆಗೆದುಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ; ಯಾವಾಗ ತೆಗೆದುಕೊಂಡು ಬರುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಈ ಅಧಿವೇಶನದಲ್ಲೇ ತರುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಬಿ ರಾಮಸ್ವಾಮಿ:—ಎಲ್ಲಾ ಸೆಂಟ್ರಲ್ ಗೌರ್ನಮೆಂಟ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ, ಸೆಂಟ್ರಲ್ ಗೌರ್ನಮೆಂಟ್ ಡೈರೆಕ್ಷನ್ ಕೊಡಲಿಲ್ಲ ಎಂದು ಹೇಳಿದ್ದೀರಿ, ಅವರು ಡೈರೆಕ್ಷನ್ ಕೊಡದೇ ಇದ್ದ ಪಕ್ಷದಲ್ಲಿ ಸೆಂಟ್ರಲ್ ಗೌರ್ನಮೆಂಟಿಗೆ ಏತಕ್ಕೆ ಕೊಟ್ಟಿರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಮಾನ್ಯ ಸದಸ್ಯರು ನಾನು ಹೇಳಿದಂತಹ ಉತ್ತರವನ್ನು ಸರಿಯಾಗಿ ಅರ್ಥಮಾತಿಕೊಳ್ಳಲಿಲ್ಲ ಎಂತ ಕಾಣುತ್ತೆ. ನಾವು ತಿಳಿಸಿರುವುದು ಏನು ಎಂದರೆ ಇಲ್ಲಿ ಚರ್ಚೆ ಮಾಡಬೇಕಾದುದು ಇಲ್ಲ ಕೇಂದ್ರಕ್ಕೆ ಪಹಿಸಿಕೊಡಬೇಕು ಎಂದು ಎರಡು ಸಭೆಗಳಲ್ಲಿ ತೀರ್ಮಾನವಾದ ಮೇಲೆ ಅವರಿಗೆ ಬಿಟ್ಟು ಬಿಟ್ಟಿದೇವೆ ಆ ಒಂದು ಸಂದರ್ಭದಲ್ಲಿ ನಾವು ತಯಾರು ಮಾಡಿದಂತಹ ಬಿಲ್ಲಿನ ವಿವರಗಳನ್ನು ಅವರಿಗೆ ಕಳಿಸಿಕೊಟ್ಟಿದ್ದೇವೆ ಎಂದು ಹೇಳಿದೆ. ಡೈರೆಕ್ಷನ್ ಹೇಗೆ ಮಾಡಬೇಕು ಎಂದು ನಮಗೆ ಕಳಿಸಿ ಕೊಟ್ಟಿಲ್ಲ.

SRI PRABHAKAR TELKAR:—It was stated that proposals have been sent to the Central Government. Will the Government enlighten this House about those proposals?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಆ ಬಿಲ್ಲಿನಲ್ಲಿ ತಯಾರು ಮಾಡಿದುತಹ ವಿವರಗಳು ಮಾನ್ಯ ಸಭೆಗೆ ಗೊತ್ತು.

ಶ್ರೀ ಕೆ. ಎಚ್. ಹನುಮೇಗೌಡ:—ಗ್ರಾಮಾಂತರ ಪ್ರದೇಶದ ಆಸ್ತಿ ಮಿತಿಯನ್ನು ಬಹಳ ತಾತ್ಕಾರಿಯಿಂದ ತಂದಿದ್ದೀರಿ, ಪಟ್ಟಣದ ಆಸ್ತಿಮಿತಿಯನ್ನು ಸರ್ಕಾರ ಅಷ್ಟೇ ತಾತ್ಕಾರಿಯಿಂದ ತೀರ್ಮಾನ ಮಾಡಿ ಏತಕ್ಕೆ ತರಲಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಕೇಂದ್ರ ಸರ್ಕಾರದವರು ಮಾಡಿದ್ದು. ಒಳ್ಳೆಯ ಶಾಸನವನ್ನು ಎಲ್ಲಾ ರಾಜ್ಯಗಳಿಗೂ ಏಕರೀತಿಯಾದ ಕಾನೂನು ಸಾಧ್ಯವಾಗುವುದಾದ್, ಪರಿಶೀಲನೆ ಮಾಡುವುದು ಎಂದು ಸಭೆಗೆ ಅವರು ಒಪ್ಪಿಗೆಯನ್ನು ತಿಳಿಸಿದ್ದಾರೆ. ಅವರು ಸಹ ಕೂಡಲೇ ತಗುತ್ತಾರೆ ಎಂದು ಪತ್ರಿಕೆಯಲ್ಲಿ ವರ್ತಮಾನ ಬಂದಿದೆ.

SRI D. B. KALMANKAR:—In answer to (c) it is stated that this Government has received a communication. May I know what is the communication received, and whether this transfer of properties in urban areas included not only vacant sites but also buildings?

ಶ್ರೀ ಎನ್ ಹುಚ್ಚಮಾಸ್ತಿಗೌಡ:—ನಗರ ಪ್ರದೇಶದಲ್ಲಿ ಇರತಕ್ಕ ಖಾಲಿ ನಿವೇಶನಗಳ ಪರಭಾರೆ ಮಾಡುವುದರ ಮೇಲೆ ಪ್ರತಿ ಬಂಧ ಹಾಕತಕ್ಕ ಕಾನೂನು ಮಾಡಬೇಕು, ಇವನ್ನು ಪರ್ಯಾಲೋಚನೆ ಮಾಡಬೇಕೆಂದು ನಮಗೆ ತಿಳಿಸಿಕೊಟ್ಟಿದ್ದಾರೆ ಅದು ಈ ಕಾಗದದ ಸಾರಾಂಶ.

MADAM SPAKER:—Since the Hon. Minister is not in station. I hold over Question No. 5/4.